**451/2022**

**ಪಿ ಡಬ್ಲ್ಯೂ : 1**

**ದಿಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 5 ರವರ ಪರ ಶ್ರೀ ಎ ಎಂ ಜಿ ವಕೀಲರಿಂದ ಃ**

ಸ.ನಂ. 100/1, 100/2 ಮತ್ತು ಸ.ನಂ. 98/2 ಮೂರು ಸ್ವತ್ತುಗಳು ಒಂದೇ ಕಡೆ ಕೂಡಿರುತ್ತವೆ. ಸದರಿ ಸ್ವತ್ತುಗಳು ಒಂದೇ ಕೂಡಿರುತ್ತವೆ ಎಂದು ತೋರಿಸಲು ನಾನು ಯಾವುದೇ ಸ್ಕೆಚ್ ನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸದರಿ 3 ಸ್ವತ್ತುಗಳಲ್ಲಿ ಎರಡು ಸ್ವತ್ತುಗಳನ್ನು ನನ್ನ ಅಣ್ಣ ನವರು ವ್ಯವಸಾಯ ಮಾಡುತ್ತಿದ್ದು, ಒಂದು ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಯಾವ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಹೋದರ ರಾಜಣ್ಣ ಅಂದರೆ ಪ್ರತಿವಾದಿ 4 ರವರು ಹೊಲದಲ್ಲಿ ವ್ಯವಸಾಯ ಮಾಡುತ್ತಿದ್ದು, ನನ್ನ ಮತ್ತೋರ್ವ ಸಹೋದರ ತೀರಿಕೊಂಡಿದ್ದು, ಅವರ ಹೆಂಡತಿ ಮಕ್ಕಳು ಗದ್ದೆಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಸದರಿ ಜಮೀನಿನಲ್ಲಿ ನಾನು ವ್ಯವಸಾಯ ಮಾಡುತ್ತಿಲ್ಲ.

ದಾವಾ ಐಟಂ ನಂಬರ್ 1 ರಲ್ಲಿ ಫ್ಯಾಕ್ಟರಿ ಹಾಕಿರುತ್ತಾರೆ ಎಂದರೆ ಸರಿ. ನಾನು ಯಾವ ಸ್ವತ್ತು ಎಲ್ಲಿ ಇರುತ್ತದೆ ಎಂದು ನಾನು ನೋಡಿರುತ್ತೇನೆ. ಅದರ ಚೆಕ್ ಬಂದಿ ನನಗೆ ಹೇಳಲಾಗುವುದಿಲ್ಲ. ನನಗೆ ಓದು ಬರಹ ಬರುವುದಿಲ್ಲ. ಸ.ನಂ. 100/1 ರಲ್ಲಿ ಇರುವ ಫ್ಯಾಕ್ಟರಿಯಲ್ಲಿ ಸುಮಾರು 100 ಜನ ಕೆಲಸ ಮಾಡುತ್ತಾರೆ ಎಂದರೆ ಸರಿ. ಮಾಲೀಕರು ಎಲ್ಲ ಕಾನೂನು ರೀತಿಯಲ್ಲಿ ಪರವಾನಿಗೆ ಪಡೆದು ಫ್ಯಾಕ್ಟರಿಯನ್ನು ಹಾಕಿರುತ್ತಾರೆ ಎಂದರೆ ಸರಿ. ಸ.ನಂ. 100/1 ವ್ಯವಸಾಯ ಭೂಮಿ ಅಲ್ಲ ಎಂದರೆ ಸರಿ. ಸ.ನಂ. 100/1 ರಲ್ಲಿ ವ್ಯವಸಾಯ ಮಾಡಲು ಆಗುವುದಿಲ್ಲ ಎಂದರೆ ಸರಿ. ಅಲ್ಲಿ ಫ್ಯಾಕ್ಟರಿ ಇರುತ್ತದೆ. ಅಲ್ಲಿ ಫ್ಯಾಕ್ಟರಿ ಇರುವ ಕಾರಣ ಅದನ್ನು ಭಾಗ ಮಾಡಲು ಬರುವುದಿಲ್ಲ ಎಂದರೆ ನನಗೆ ಭಾಗ ಬರಬೇಕು ಎಂದು ನುಡಿಯುತ್ತಾರೆ. ನಾನು ಅದರಲ್ಲಿ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ . ಯಾವ ಭೂಮಿ, ಯಾವ ಸ್ವತ್ತು ಎಲ್ಲಿ ಇರುತ್ತದೆ ಎಂದು ನಾನು ಈ ದಿನದವರೆಗೂ ನೋಡಿರುವುದಿಲ್ಲ ಎಂದರೆ ನೋಡಿರುತ್ತೇನೆ.

ನಾನಾಗಲಿ , ನನ್ನ ತಂದೆ ತಾಯಿಗಾಗಲಿ ಈ ಭೂಮಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಫ್ಯಾಕ್ಟರಿ ಹಾಕಿರುವ ವ್ಯಕ್ತಿಗಳಿಂದ ಹಣ ಪಡೆಯಲು ನಾನು ನನ್ನ ಅಣ್ಣ ತಮ್ಮಂದಿರ ಮಾತು ಕೇಳಿ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಫ್ಯಾಕ್ಟರಿಯ ಭೂಮಿ 2006 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಈ ಕೇಸ್ ಹಾಕಿದಾಗ ಮಾರಾಟದ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಹಾಕಿದ ನಂತರ ನನಗೆ ಸದರಿ ಮಾರಾಟದ ಬಗ್ಗೆ ಗೊತ್ತಾಗಿರುತ್ತದೆ.

ನಾನು ದಾವಾದಲ್ಲಿ ಇರುವ 3 ಆಸ್ತಿಗಳಲ್ಲಿ ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದು ನನ್ನ ವಾದಪತ್ರದಲ್ಲಿ ಹೇಳಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಈ ಹಿಂದೆ ನನ್ನ ತಂದೆ ಇದ್ದಾಗ ನಾನು ವ್ಯವಸಾಯ ಮಾಡುತ್ತಿದ್ದೆ, ತದನಂತರ ನನ್ನ ಸಹೋದರರು ಮಾಡುತ್ತಿದ್ದು, ನಾನು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ. ನಾನು ವ್ಯವಸಾಯ ಮಾಡುತ್ತಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ಪಹಣಿಗಳನ್ನು ನೀಡಿದ್ದೀರಾ ಎಂದರೆ ಇಲ್ಲ. ನಾನು ಸದರಿ ಜಮೀನಿನಲ್ಲಿ ನನ್ನ ಮದುವೆಯಾಗುವ ಸಮಯದವರೆಗೂ ಅಂದರೆ 40 ವರ್ಷಗಳ ಹಿಂದೆ ನಾನು ವ್ಯವಸಾಯ ಮಾಡುತ್ತಿದ್ದೆ. ನಾನು ಯಾವುದೇ ವ್ಯವಸಾಯ ಮಾಡುತ್ತಿಲ್ಲ, ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೂರು ಸ್ವತ್ತುಗಳು ಎಷ್ಟು ಹಣಕ್ಕೆ ಪ್ರತಿ ಎಕರೆಗೆ ಹೋಗಬಹುದು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ನ್ನು ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಪ್ರತಿವಾದಿ 1 ರಿಂದ 4 ರವರ ಪರ ವಕೀಲರಾದ ಶ್ರೀ ಎಸ್ ಜಿ ಆರ್ ರವರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**